# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521

**ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.**

ಅಂತರ್ಜಾಲ : https://kptcl.karnataka.gov.in

ದೂರವಾಣಿ ಸಂಖ್ಯೆ : 080-22212343

ಇ-ಮೇಲ್ ವಿಳಾಸ : director.ahr.kptcl@gmail.com


---

**ವಿಷಯ:** ಭೂ ಸ್ವಾಧೀನವಾದ ಜಮೀನುಗಳಿಗೆ ಸಂಬಂಧಿಸಿದ ಭೂ ಸ್ವಾಧೀನವಾದ ನಂತರ ಕಂದಾಯ ದಾಖಲೆಗಳಲ್ಲಿ ಹಾಗೂ ಸರ್ವೆ ದಾಖಲೆಗಳಲ್ಲಿ ಇಂಡೀಕರಣ ಮಾಡುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ರವರ ಪತ್ರ ಸಂಖ್ಯೆ ಆರ್‌ಡಿ 16 ಎಕ್ಯೂವಿ 2023 ದಿನಾಂಕ 05.01.2024
2. ಸರ್ಕಾರದ ಅಪರ ಕಾರ್ಯದರ್ಶಿ, ಇಂಧನ ಇಲಾಖೆ ರವರ ಪತ್ರ ಸಂಖ್ಯೆ ಎನರ್ಜಿ 49 ಇಇಬಿ 2024 ದಿನಾಂಕ 22.01.2024
3. ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರಿಂದ ಅನುಮೋದಿಸಲ್ಪಟ್ಟ ಟಿಪ್ಪಣಿ ದಿನಾಂಕ 19.04.2024

*******

**ಪೀಠಿಕೆ:**

ಭೂ ಸ್ವಾಧೀನವಾದ ಜಮೀನುಗಳಿಗೆ ಸಂಬಂಧಿಸಿದಂತೆ, ಭೂ ಸ್ವಾಧೀನವಾದ ನಂತರ ಕಂದಾಯ ದಾಖಲೆಗಳಲ್ಲಿ ಹಾಗೂ ಸರ್ವೆ ದಾಖಲೆಗಳಲ್ಲಿ ಇಂಡೀಕರಣಗೊಳಿಸಲು ನೋಡಲ್ ಅಧಿಕಾರಿಯನ್ನು ನೇಮಕ ಮಾಡುವಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ರವರು ಕೋರಿರುವ ದಿನಾಂಕ 05.01.2024 ರ ಪತ್ರದಲ್ಲಿ ಕೆಳಕಂಡ ಅಂಶಗಳನ್ನು ವಿವರಿಸಲಾಗಿರುತ್ತದೆ.

ಸಾರ್ವಜನಿಕ ಉದ್ದೇಶಕ್ಕೆ ಹಾಗೂ ಸರ್ಕಾರದ ವಿವಿಧ ಯೋಜನೆಗಳಿಗೆ ಅಗತ್ಯವಿರುವ ಖಾಸಗಿ ಜಮೀನುಗಳನ್ನು "ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ – 2013" ರಡಿ ಭೂಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ. ಭೂ ಸ್ವಾಧೀನ ಪ್ರಕ್ರಿಯೆ ಮುಕ್ತಾಯಗೊಂಡ ನಂತರ ಕಂದಾಯ ದಾಖಲೆಗಳಲ್ಲಿ ಹಾಗೂ ಸರ್ವೆ ದಾಖಲೆಗಳಲ್ಲಿ ಭೂಕೋರಿಕೆ ಇಲಾಖೆಯ ಹೆಸರಿಗೆ ಇಂಡೀಕರಣ ಮಾಡದೇ ಇರುವುದು, ಹಿಂದಿನ ಭೂ ಸ್ವಾಧೀನ ಕಾಯ್ದೆ-1894 ರಡಿ ಸ್ವಾಧೀನಪಡಿಸಿಕೊಳ್ಳಲಾಗಿದ್ದ ಜಮೀನುಗಳಿಗೆ ಸಂಬಂಧಿಸಿದ ದಾಖಲೆಗಳಲ್ಲಿಯೂ ಸಹಾ ಈವರೆಗೂ ಇಂಡೀಕರಣ ಮಾಡದ ಕಾರಣ ಅದೇ ಜಮೀನನ್ನು ಪುನರಾವರ್ತಿತವಾಗಿ ಮತ್ತೊಮ್ಮೆ ಸ್ವಾಧೀನಪಡಿಸಿಕೊಂಡು ಪರಿಹಾರ ನೀಡಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಅಲ್ಲದೇ ಸ್ವಾಧೀನಪಡಿಸಿಕೊಂಡಿರುವ ಜಮೀನುಗಳನ್ನು ಭೂ ಕೋರಿಕೆ ಇಲಾಖೆಗಳು ಉದ್ದೇಶಿತ ಯೋಜನೆಗಳಿಗೆ ಬಳಸಿಕೊಂಡಿದ್ದರೂ ಸಹಾ ಜಮೀನಿನ ಮಾಲೀಕತ್ವವು ಭೂ ಮಾಲೀಕರ ಹೆಸರುಗಳಲ್ಲಿಯೇ ಮುಂದುವರೆಯುತ್ತಿರುವ ಪ್ರಕರಣಗಳು ಯಥೇಚ್ಛವಾಗಿರುವುದನ್ನು ಗಮನಿಸಲಾಗಿರುತ್ತದೆ.

ಭೂ ಸ್ವಾಧೀನ ಪ್ರಕ್ರಿಯೆ ಮುಕ್ತಾಯಗೊಂಡ ನಂತರ ಕಂದಾಯ ದಾಖಲೆಗಳಲ್ಲಿ ಹಾಗೂ ಸರ್ವೆ ದಾಖಲೆಗಳಲ್ಲಿ ಕಡ್ಡಾಯವಾಗಿ ಇಂಡೀಕರಣ ಮಾಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ ದಿನಾಂಕ 13.09.2023 ರ ಪತ್ರದಲ್ಲಿ ಸೂಚಿಸಲಾಗಿರುತ್ತದೆ. ಅಲ್ಲದೇ, ಸರ್ಕಾರದ ಸುತ್ತೋಲೆ ಸಂಖ್ಯೆ ಕಂಇ 13 ಎಕ್ಯೂಎಂ 2022, ದಿನಾಂಕ 17.12.2022 ರಲ್ಲಿ ಈ ಸಂಬಂಧ ಎಲ್ಲಾ ಪ್ರಾದೇಶಿಕ ಆಯುಕ್ತರುಗಳು, ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ವಿಶೇಷ ಭೂಸ್ವಾಧೀನಾಧಿಕಾರಿ / ಉಪ-ವಿಭಾಗಾಧಿಕಾರಿ / ಭೂಸ್ವಾಧೀನಾಧಿಕಾರಿಗಳಿಗೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ.

ಈ ಸಂಬಂಧ, ಸದರಿ ವಿಷಯದ ಕುರಿತು ಅಗತ್ಯ ಕ್ರಮವಹಿಸುವಂತೆ ಅಪರ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ ರವರು ದಿನಾಂಕ: 22/01/2024 ರ ಪತ್ರದಲ್ಲಿ ಸೂಚಿಸಲಾಗಿರುತ್ತದೆ.

ಕವಿಪ್ರನಿನಿ ಗೆ ಸಂಬಂಧಪಟ್ಟ ಎಲ್ಲಾ ಜಮೀನುಗಳ ಮೂಲ ಭೂದಾಖಲೆಗಳನ್ನು ಸುರಕ್ಷಿತವಾಗಿ ಸಂರಕ್ಷಿಸಿಟ್ಟುಕೊಳ್ಳಲು ಅಧೀಕ್ಷಕ ಇಂಜಿನಿಯರ್ (ಸಿವಿಲ್), ಮುಖ್ಯ ಇಂಜಿನಿಯರ್ (ಯೋಜನೆ ಮತ್ತು ಸಮನ್ವಯ) ರವರ ಕಛೇರಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು ರವರನ್ನು ನಿಗಮದ ಆದೇಶ ಸಂಖ್ಯೆ: ಬಿ9/2451/05-06, ಬೆಂಗಳೂರು ದಿನಾಂಕ : 20/03/2006 ರಲ್ಲಿ ನೇಮಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಕೆಳಕಂಡಂತೆ ಆದೇಶಿಸಲಾಗಿದೆ.

**ಆದೇಶ ಸಂಖ್ಯೆ : KPTCL/GMT/CIVL(B7)/24/2024-MANAGER ESTATE (E-102117) ದಿನಾಂಕ** 07 MAY 2024

ಕವಿಪ್ರನಿನಿಯಲ್ಲಿ ಇದುವರೆಗೂ ಭೂ ಸ್ವಾಧೀನಪಡಿಸಿಕೊಂಡಿರುವ ಜಮೀನುಗಳಿಗೆ ಸಂಬಂಧಿಸಿದ ಭೂದಾಖಲೆಗಳಲ್ಲಿ ಕವಿಪ್ರನಿನಿ ಹೆಸರಿಗೆ ಇಂಡೀಕರಣಗೊಳ್ಳದೇ ಇರುವ ಪ್ರಕರಣಗಳಲ್ಲಿ ಕೂಡಲೇ ಕವಿಪ್ರನಿನಿ ಹೆಸರಿಗೆ ಇಂಡೀಕರಣಗೊಳಿಸುವ ಸಲುವಾಗಿ ಕಂದಾಯ ಇಲಾಖೆಯೊಂದಿಗೆ ಸಮನ್ವಯ ಸಾಧಿಸಲು, ಅಧೀಕ್ಷಕ ಇಂಜಿನಿಯರ್ (ಸಿವಿಲ್), ಮುಖ್ಯ ಇಂಜಿನಿಯರ್ (ಯೋಜನೆ & ಸಮನ್ವಯ) ರವರ ಕಛೇರಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು ರವರನ್ನು ನೋಡಲ್ ಅಧಿಕಾರಿಯಾಗಿ ನೇಮಕ ಮಾಡಲಾಗಿದೆ.

ಈ ಸಂಬಂಧ, ಆಯಾ ಪ್ರಸರಣ ವಲಯಗಳಿಂದ ಪ್ರಸ್ತಾವನೆಗಳನ್ನು ಪಡೆದು, ಪರಿಶೀಲಿಸಿದ ನಂತರ, ನೋಡಲ್ ಅಧಿಕಾರಿಯು ನೇರವಾಗಿ ಅಂತಹ ಪ್ರಸ್ತಾವನೆಗಳನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿ ಇಂಡೀಕರಣ ಮಾಡಲು ಅಗತ್ಯ ಕ್ರಮವಹಿಸುವಂತೆ ಸೂಚಿಸಲಾಗಿದೆ.

ಆದೇಶದ ಮೇರೆಗೆ,

Sudha 6/5/24

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ),
ಕವಿಪ್ರನಿನಿ, ಬೆಂಗಳೂರು.

**ಪ್ರತಿಗಳು:**

1. ಎಲ್ಲಾ ಮುಖ್ಯ ಇಂಜಿನಿಯರುಗಳು (ವಿ), ಕವಿಪ್ರನಿನಿ
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ
3. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
4. ಎಲ್ಲಾ ಅಧೀಕ್ಷಕ ಇಂಜಿನಿಯರುಗಳು (ವಿ) / (ಸಿವಿಲ್), ಕವಿಪ್ರನಿನಿ
5. ಅಧೀಕ್ಷಕ ಇಂಜಿನಿಯರ್ (ವಿ), (ಐ.ಟಿ.), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು – ಸದರಿ ಆದೇಶವನ್ನು ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸುವುದು.
6. ಎಲ್ಲಾ ಲೆಕ್ಕನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳು (ವಿ) / (ಸಿವಿಲ್), ಕವಿಪ್ರನಿನಿ
8. ಎಲ್ಲಾ ಉಪಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ
9. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಪ್ರಸರಣ) / (ಹಣಕಾಸು) / (ಆ ಮತ್ತು ಮಾ.ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
10. ಎಲ್ಲಾ ಲೆಕ್ಕಾಧಿಕಾರಿಗಳು, ಕವಿಪ್ರನಿನಿ
11. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರುಗಳು (ವಿ) / (ಸಿವಿಲ್), ಕವಿಪ್ರನಿನಿ
12. ಲೆಕ್ಕಾಧಿಕಾರಿ (ಕೋಡಿಫಿಕೇಷನ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು

**ಕರ್ನಾಟಕ ಸರ್ಕಾರ**

**ಸಂಖ್ಯೆ.** ಕಂಇ 16 ಎಕ್ಯೂವಿ 2023

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 13-09-2023

**ಇಂದ,**
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ,
ಬೆಂಗಳೂರು – 560001

**ಇವರಿಗೆ,**
ಎಲ್ಲಾ ಜಿಲ್ಲಾಧಿಕಾರಿಗಳು/ ಉಪವಿಭಾಗಾಧಿಕಾರಿಗಳು/ ಭೂಸ್ವಾಧೀನಾಧಿಕಾರಿಗಳು/ ವಿಶೇಷ ಭೂಸ್ವಾಧೀನಾಧಿಕಾರಿಗಳು.

**ಮಾನ್ಯರೆ,**

**ವಿಷಯ:** ಭೂಸ್ವಾಧೀನವಾದ ಜಮೀನುಗಳಿಗೆ ಸಂಬಂಧಿಸಿದಂತೆ, ಭೂಸ್ವಾಧೀನವಾದ ನಂತರ ಕಂದಾಯ ದಾಖಲೆಗಳಲ್ಲಿ ಹಾಗೂ ಸರ್ವೆ ದಾಖಲೆಗಳಲ್ಲಿ ಇಂದೀಕರಣ ಮಾಡುವ ಬಗ್ಗೆ.

**ಉಲ್ಲೇಖ:** ಮಾನ್ಯ ಉಚ್ಚ ನ್ಯಾಯಾಲಯ, ಕಲಬುರಗಿ ಪೀಠ ಇಲ್ಲಿ ದಾಖಲಾಗಿರುವ W.P.No: 204862/2019(KLR-RR/SUR) ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ:20.07.2023ರಂದು ನೀಡಿರುವ ಆದೇಶ.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಉಚ್ಚ ನ್ಯಾಯಾಲಯ ಕಲಬುರಗಿ ಪೀಠದ W.P.No: 204862/2019(KLR-RR/SUR), ದಿನಾಂಕ:20.07.2023 ರಂದು ನೀಡಿರುವ ತೀರ್ಪಿನಲ್ಲಿ ಮಾನ್ಯ ನ್ಯಾಯಾಲಯವು ಭೂಸ್ವಾಧೀನವಾದ ಜಮೀನುಗಳಿಗೆ ಸಂಬಂಧಿಸಿದಂತೆ, ಭೂಸ್ವಾಧೀನವಾದ ನಂತರ ಕಂದಾಯ ದಾಖಲೆಗಳಲ್ಲಿ ಹಾಗೂ ಸರ್ವೆ ದಾಖಲೆಗಳಲ್ಲಿ ಇಂದೀಕರಣ ಮಾಡುವ ಕಾರ್ಯ ಪೂರ್ಣಗೊಳಿಸುತ್ತಿಲ್ಲ, ಎಂದು ಗಮನಿಸಿರುವ ಹಿನ್ನೆಲೆಯಲ್ಲಿ, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ಇವರಿಗೆ ನಿರ್ದೇಶನ ನೀಡಿರುತ್ತದೆ (ಆದೇಶದ ಪ್ರತಿ ಲಗತ್ತಿಸಿದೆ).

ಆದ್ದರಿಂದ ಭೂಸ್ವಾಧೀನ ಪ್ರಕ್ರಿಯೆ ಮುಕ್ತಾಯಗೊಂಡ ನಂತರ ಕಂದಾಯ ದಾಖಲೆಗಳಲ್ಲಿ ಹಾಗೂ ಸರ್ವೆ ದಾಖಲೆಗಳಲ್ಲಿ ಕಡ್ಡಾಯವಾಗಿ ಇಂದೀಕರಣ ಮಾಡಲು ಕೂಡಲೇ ಅಗತ್ಯ ಕ್ರಮಕೈಗೊಳ್ಳುವಂತೆ ತಮಗೆ ತಿಳಿಸಿದೆ.

ತಮ್ಮ ನಂಬುಗೆಯ,

SRINIVAS A
**(ಶ್ರೀನಿವಾಸ.ಎ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂಸ್ವಾಧೀನ-1 & 3)

ಹೊರಡಿಸಿದೆ
13/09/23

o/c



Generated from eOffice by S Srinivasa, KPTCL-SA-EST(SS), SENIOR ASSISTANT, KARNATAKA POWER TRANSMISSION CORPORATION LTD on 07/05/2024 11:27 AM

ಕರ್ನಾಟಕ ಸರಕಾರ

ಸಂಖ್ಯೆ:ಕಂಇ 13 ಎಕ್ಯೂಎಂ 2022

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:17-12-2022

## ಸುತ್ತೋಲೆ

ವಿಷಯ: ಭೂಸ್ವಾಧೀನ ಕಾಯ್ದೆಗಳಡಿಯಲ್ಲಿ ಭೂಸ್ವಾಧೀನಪಡಿಸಿಕೊಂಡ ಹಾಗೂ ಭೂಸ್ವಾಧೀನಪಡಿಸಿಕೊಳ್ಳುವ ಜಮೀನಿನ ದಾಖಲೆಗಳನ್ನು ಸಕ್ಷಮ ಪ್ರಾಧಿಕಾರಗಳು ನಿಗಧಿತ ಅವಧಿಯಲ್ಲಿ ಕಾಲೋಚಿತಗೊಳಿಸುವ ಕುರಿತು ಮಾರ್ಗಸೂಚಿಗಳು.

*****

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013ರಡಿ ಸಾರ್ವಜನಿಕ ಉದ್ದೇಶಕ್ಕೆ ಹಾಗೂ ಸರ್ಕಾರದ ವಿವಿಧ ಯೋಜನೆಗಳಿಗೆ ಅಗತ್ಯವಿರುವ ಖಾಸಗೀ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲಾಗುತ್ತದೆ. ಸದರಿ ಕಾಯ್ದೆಯಡಿ ಭೂಸ್ವಾಧೀನಪಡಿಸಿಕೊಂಡ ನಂತರ ಆಯಾಯ ಸಕ್ಷಮ ಪ್ರಾಧಿಕಾರಗಳು ಸ್ವಾಧೀನಪಡಿಸಿಕೊಂಡ ಜಮೀನಿನ ದಾಖಲಾತಿಗಳನ್ನು ಸ್ವಾಧೀನಪಡಿಸಿಕೊಂಡ ಸಂಸ್ಥೆಯ ಹೆಸರಿಗೆ ಕಾಲೋಚಿತಗೊಳಿಸದೇ ಇರುವುದು, ಮತ್ತು ಹಿಂದಿನ ಭೂಸ್ವಾಧೀನ ಕಾಯ್ದೆ-1894ರಡಿ ಸ್ವಾಧೀನಪಡಿಸಿಕೊಳ್ಳಲಾಗಿದ್ದ ಜಮೀನಿನ ದಾಖಲಾತಿಗಳನ್ನೂ ಸಹ ಇದುವರೆಗೆ ಕಾಲೋಚಿತಗೊಳಿಸದೇ ಇದ್ದುದರಿಂದ ಅದೇ ಜಮೀನನ್ನು ಪುನರಾವರ್ತಿತವಾಗಿ ಮತ್ತೊಮ್ಮೆ ಸ್ವಾಧೀನಪಡಿಸಿಕೊಂಡು ಎರಡೆರಡು ಬಾರಿ ಪರಿಹಾರ ನೀಡುತ್ತಿರುವ ಪ್ರಕರಣಗಳು ಹಾಗೂ ಸ್ವಾಧೀನಪಡಿಸಿಕೊಂಡ ಜಮೀನನ್ನು ಉದ್ದೇಶಿತ ಯೋಜನೆಗೆ ಬಳಸಿಕೊಂಡಿದ್ದರೂ ಸಹ ಜಮೀನಿನ ಮಾಲೀಕತ್ವವು ಭೂಮಾಲೀಕರ ಹೆಸರುಗಳಲ್ಲಿಯೇ ಮುಂದುವರೆಯುತ್ತಿರುವ ಪ್ರಕರಣಗಳು ಯಥೇಚ್ಛವಾಗಿರುವುದನ್ನು ಗಮನಿಸಲಾಗಿದೆ.

ಭೂಸ್ವಾಧೀನ ಪ್ರಕರಣಗಳಲ್ಲಿ ಕೋರಿಕಾ ಇಲಾಖೆಯಿಂದ ಪ್ರಸ್ತಾವನೆಗಳನ್ನು ಪಡೆದು ಭೂಸ್ವಾಧೀನ ಕಾಯ್ದೆಯಡಿ ಸ್ವಾಧೀನ ಪ್ರಕ್ರಿಯೆಯನ್ನು ನಿರ್ವಹಿಸಿ, ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಪರಿಹಾರ ಪಾವತಿಸಿದ ನಂತರ ಸದರಿ ಜಮೀನುಗಳನ್ನು ಕಬ್ಜಾ ಪಡೆದು ಕೋರಿಕಾ ಇಲಾಖೆಗೆ ಹಸ್ತಾಂತರಿಸಲಾಗುತ್ತದೆ. ಈ ರೀತಿ ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಗೊಳ್ಳುವಲ್ಲಿ ಕೋರಿಕೆ ಇಲಾಖೆಯಿಂದ ಹಿಡಿದು ಕಂದಾಯ ಇಲಾಖೆ (Acquiring Agency)ವರೆಗೂ ಪ್ರತಿ ಹಂತದಲ್ಲಿಯೂ ಸಂಬಂಧಪಟ್ಟ ನೌಕರರು/ಅಧಿಕಾರಿಗಳಿಗೆ ಜವಾಬ್ದಾರಿ ಮತ್ತು ಹೊಣೆಗಾರಿಕೆಗಳನ್ನು ಹಂಚಲಾಗಿರುತ್ತದೆ. ಭೂಸ್ವಾಧೀನ ಪ್ರಕ್ರಿಯೆ ಎಂದರೆ ಕೇವಲ ಭೂಸ್ವಾಧೀನ ಕಾಯ್ದೆಯಡಿ ಮಾತ್ರ ಕಾರ್ಯ ನಿರ್ವಹಿಸದೇ ಸಂಬಂಧಪಟ್ಟ ಪ್ರಾಧಿಕಾರಗಳು ಕಂದಾಯ ಇಲಾಖೆಯ ಇನ್ನಿತರೆ ಕಾಯ್ದೆಗಳಾದ ಭೂ-ಕಂದಾಯ ಕಾಯ್ದೆ ಮತ್ತು ನಿಯಮಗಳು, ಭೂ-ಮಂಜೂರಾತಿ ನಿಯಮಗಳು ಹಾಗೂ ಕರ್ನಾಟಕ ಸರ್ವೆ ಕೈಪಿಡಿಯಲ್ಲಿ ವಿವರಿಸಿರುವಂತೆ ಪ್ರಕಾರ್ಯಗಳನ್ನು ನೆರವೇರಿಸಬೇಕಾಗುತ್ತದೆ.

ಭೂಮಿಯ ಮೇಲಿನ ಹಕ್ಕು ಭೂ ಕಂದಾಯ ಕಾಯ್ದೆಯನ್ವಯ ರಾಜ್ಯ ಸರ್ಕಾರಕ್ಕೆ ನಿಹಿತಗೊಂಡಿದ್ದರೂ ಸಹ ಸದರಿ ಭೂಮಿಯಲ್ಲಿ ಸರ್ಕಾರಿ ಮಾಲೀಕತ್ವದ ಮತ್ತು ಖಾಸಗಿ ಮಾಲೀಕತ್ವದ ಜಮೀನುಗಳಾಗಿ ವಿಂಗಡಿಸಿದ್ದು, ಖಾಸಗಿ ಮಾಲೀಕತ್ವದ ಜಮೀನಿನ ಹಕ್ಕು, ಭಾರತದ ಸಂವಿಧಾನ ಅನುಚ್ಛೇಧ 300 A ರಡಿ ಬರುವುದರಿಂದ ಮತ್ತು ಕಾನೂನಾತ್ಮಕ ಹಕ್ಕಾಗಿರುವುದರಿಂದ ಸಾರ್ವಜನಿಕ ಯೋಜನೆಗಳಿಗಾಗಿ ಅಗತ್ಯವಿರುವ ಖಾಸಗಿ ಜಮೀನುಗಳನ್ನು ಪರಿಹಾರ ಪಾವತಿಸುವ ಮುಖಾಂತರ ಭೂಸ್ವಾಧೀನ ಕಾಯ್ದೆಯಡಿ ಜಮೀನುಗಳನ್ನು ಅರ್ಜಿಸಿ, ಸರ್ಕಾರಕ್ಕೆ ನಿಹಿತಗೊಳಿಸಿ ಮೂಲಭೂತ ಸೌಕರ್ಯಗಳನ್ನು ನಿರ್ಮಾಣ ಮಾಡಿ ಸಾರ್ವಜನಿಕ ಉಪಯೋಗಕ್ಕೆ ತೆರೆದಿಡಲಾಗುತ್ತದೆ.

ಆದುದರಿಂದ ಭೂಸ್ವಾಧೀನ ಪ್ರಕ್ರಿಯೆಗಳನ್ನು ಕೈಗೊಂಡ ನಂತರ ಸ್ವಾಧೀನಪಡಿಸಿಕೊಂಡ ಜಮೀನಿನ ಭೂದಾಖಲಾತಿಗಳನ್ನು ಕಾಲೋಚಿತಗೊಳಿಸುವ ಬಗ್ಗೆ ಈ ಕೆಳಕಂಡ ಆಡಳಿತಾತ್ಮಕ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಅನುಸರಿಸುವುದು.



Generated from eOffice by S Srinivasa, KPTCL-SA-EST(SS), SENIOR ASSISTANT, KARNATAKA POWER TRANSMISSION CORPORATION LTD on 07/05/2024 11:27 AM

- ಹಳೇ ಭೂಸ್ವಾಧೀನ ಕಾಯ್ದೆ-1894ರಡಿ ಹಾಗೂ ಹೊಸ ಭೂಸ್ವಾಧೀನ ಕಾಯ್ದೆ-2013ರಡಿ ಜಮೀನನ್ನು ಸ್ವಾಧೀನಪಡಿಸಿಕೊಂಡ ನಂತರ ಸದರಿ ಕಾಯ್ದೆಗಳ ಕಲಂ-16(2)ರಡಿ ಮತ್ತು ಕಲಂ-38ರಡಿ ಜಮೀನನ್ನು ಸ್ವಾಧೀನಕ್ಕೆ ಪಡೆದು ಕೋರಿಕೆ ಇಲಾಖೆಗೆ ಹಸ್ತಾಂತರಿಸಿದ ತರುವಾಯ ಸಂಬಂಧಪಟ್ಟ ಭೂಸ್ವಾಧೀನಾಧಿಕಾರಿ / ವಿಶೇಷ ಭೂಸ್ವಾಧೀನಾಧಿಕಾರಿಗಳು ಪ್ರಾಥಮಿಕ ಮತ್ತು ಅಂತಿಮ ಅಧಿಸೂಚನೆ ಹಾಗೂ ಐತೀರ್ಪಿನ ಅನುಮೋದಿತ ಪ್ರತಿಗಳು ಮತ್ತು ಕಲಂ-16(2) ಹಾಗೂ ಕಲಂ-38(1)ರ ಅಧಿಸೂಚನೆಗಳನ್ನು ಸಂಬಂಧಪಟ್ಟ ಭೂಮಾಪನ ಇಲಾಖೆಯಲ್ಲಿನ ಸಹಾಯಕ ನಿರ್ದೇಶಕರಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಹೀಗೆ ದಾಖಲೆಗಳನ್ನು ಸಲ್ಲಿಸಿದ ಬಗ್ಗೆ ದಾಖಲಾತಿ ವಹಿಯನ್ನು ಸಕ್ಷಮ ಪ್ರಾಧಿಕಾರಗಳು ಕಡ್ಡಾಯವಾಗಿ ನಿರ್ವಹಿಸತಕ್ಕದ್ದು.
- ಈ ರೀತಿ ಸಲ್ಲಿಕೆಯಾದ ಭೂಸ್ವಾಧೀನ ಪ್ರಕರಣಗಳ ದಾಖಲೆಗಳನ್ನು ಭೂಮಾಪನ ಕಛೇರಿಯ ಅಧಿಕಾರಿ/ನೌಕರರು ಪರಿಶೀಲಿಸಿ, ನಿಗದಿತ ಅವಧಿಯಲ್ಲಿ ಪೋಡಿ ಮತ್ತು ದುರಸ್ತಿ ಕಾರ್ಯವನ್ನು ಕಡ್ಡಾಯವಾಗಿ ಕೈಗೊಳ್ಳತಕ್ಕದ್ದು.
- ಈ ರೀತಿ ಪೋಡಿ ಮತ್ತು ದುರಸ್ತಿ ಕಾರ್ಯ ಕೈಗೊಂಡ ನಂತರ ಸಂಬಂಧಪಟ್ಟ ತಹಶೀಲ್ದಾರ್ ಕಛೇರಿಯಲ್ಲಿ ಸದರಿ ದಾಖಲೆಗಳನ್ನು ಪರಿಶೀಲಿಸಿ, ಸರಿಪಡಿಸಿ ಸ್ವಾಧೀನಪಡಿಸಿಕೊಂಡ ಜಮೀನನ್ನು ಕೋರಿಕೆ ಇಲಾಖೆಯ ಹೆಸರಿಗೆ ಸೇರ್ಪಡೆಗೊಳಿಸಿ ಕಡ್ಡಾಯವಾಗಿ ಭೂದಾಖಲೆಗಳನ್ನು ನಿಗದಿತ ಅವಧಿಯಲ್ಲಿ ಅಪ್‌ಡೇಟ್ ಮಾಡತಕ್ಕದ್ದು. ಹಾಗೂ ಸಂಬಂಧಪಟ್ಟ ತಹಶೀಲ್ದಾರ್ ಕಛೇರಿಗಳಲ್ಲಿ ಭೂಸ್ವಾಧೀನ ವಹಿಗಳನ್ನು ಕಡ್ಡಾಯವಾಗಿ ನಿರ್ವಹಿಸತಕ್ಕದ್ದು.
- ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಈ ಹಿಂದೆ ಸಾರ್ವಜನಿಕ ಉದ್ದೇಶಕ್ಕೆ ಕಾಯ್ದೆಯನುಸಾರ ಭೂಸ್ವಾಧೀನಪಡಿಸಿಕೊಂಡ ಪ್ರಕರಣಗಳಲ್ಲಿ ಒಂದು ವೇಳೆ ಭೂಮಾಲೀಕರ ಹೆಸರಿನಲ್ಲಿಯೇ ಜಮೀನಿನ ಭೂದಾಖಲೆಗಳು ಮುಂದುವರೆದಿದ್ದ ಪ್ರಕರಣಗಳನ್ನು ಸಕ್ಷಮ ಪ್ರಾಧಿಕಾರಗಳು ಕೂಡಲೇ ಭೂಸ್ವಾಧೀನಪಡಿಸಿಕೊಂಡ ಸಂಸ್ಥೆಯ ಅಥವಾ ಇಲಾಖೆಯ ಹೆಸರುಗಳನ್ನು ಸಂಬಂಧಪಟ್ಟ ಆಯಾಯ ಜಿಲ್ಲಾಧಿಕಾರಿಗಳ ಗಮನಕ್ಕೆ ತರುವುದು.
- ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಇಂತಹ ಎಲ್ಲಾ ಪ್ರಕರಣಗಳನ್ನು ಸರಿಪಡಿಸಲು ಆಂದೋಲನ ರೀತಿಯಲ್ಲಿ ಕಾರ್ಯಕ್ರಮವನ್ನು ರೂಪಿಸಿಕೊಂಡು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಭೂದಾಖಲೆಗಳನ್ನು ನಿಯಮಾನುಸಾರ ಕಾಲೋಚಿತಗೊಳಿಸಲು ಕ್ರಮಕೈಗೊಳ್ಳತಕ್ಕದ್ದು. ಈ ಬಗ್ಗೆ ಪ್ರತೀ 15 ದಿನಗಳಿಗೊಮ್ಮೆ ಎಲ್ಲಾ ಜಿಲ್ಲಾಧಿಕಾರಿಗಳು ಸಕ್ಷಮ ಪ್ರಾಧಿಕಾರಗಳಿಂದ ವರದಿ ಪಡೆಯತಕ್ಕದ್ದು.

ರಾಜ್ಯದಲ್ಲಿ ಭೂಸ್ವಾಧೀನಪಡಿಸಿಕೊಳ್ಳುವ ಎಲ್ಲಾ ಸಕ್ಷಮ ಪ್ರಾಧಿಕಾರಗಳು ಈ ಸುತ್ತೋಲೆಯಲ್ಲಿನ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು. ಒಂದು ವೇಳೆ ಸ್ವಾಧೀನಪಡಿಸಿಕೊಂಡ ಜಮೀನಿನ ಭೂದಾಖಲೆಗಳನ್ನು ನಿಗದಿತ ಅವಧಿಯಲ್ಲಿ ನಿಯಮಾನುಸಾರ ಕಾಲೋಚಿತಗೊಳಿಸದೇ ಇದ್ದಲ್ಲಿ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳ ಮುಖ್ಯಸ್ಥರುಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಿ ಅವರ ವಿರುದ್ಧ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು.

07/11/22

(ಶ್ರೀನಿವಾಸ ಎ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂಸ್ವಾಧೀನ-1&3)

**ಪ್ರತಿ**

1. ಎಲ್ಲಾ ಪ್ರಾದೇಶಿಕ ಆಯುಕ್ತರುಗಳು.
2. ಎಲ್ಲಾ ಜಿಲ್ಲಾಧಿಕಾರಿಗಳು.
3. ವಿಶೇಷ ಭೂಸ್ವಾಧೀನಾಧಿಕಾರಿ / ಉಪ ವಿಭಾಗಾಧಿಕಾರಿ ಮತ್ತು ಭೂಸ್ವಾಧೀನಾಧಿಕಾರಿಯವರಿಗೆ.



Generated from eOffice by S Srinivasa, KPTCL-SA-EST(SS), SENIOR ASSISTANT, KARNATAKA POWER TRANSMISSION CORPORATION LTD on 07/05/2024 11:27 AM

ರಾಜೇಂದರ್ ಕುಮಾರ್ ಕಟಾರಿಯಾ, ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಕಂದಾಯ ಇಲಾಖೆ

ಕರ್ನಾಟಕ ಸರ್ಕಾರ

**Rajender Kumar Kataria, I.A.S.,**
Principal Secretary to Government
Revenue Department

**ಅ.ಸ.ಪತ್ರ ಸಂಖ್ಯೆ:**ಆರ್‌ಡಿ 16 ಎಕ್ಯೂವಿ 2023 ದಿನಾಂಕ:05.01.2024

**ಮಾನ್ಯರೆ,**

ಸಾರ್ವಜನಿಕ ಉದ್ದೇಶಕ್ಕೆ ಹಾಗೂ ಸರ್ಕಾರದ ವಿವಿಧ ಯೋಜನೆಗಳಿಗೆ ಅಗತ್ಯವಿರುವ ಖಾಸಗಿ ಜಮೀನುಗಳನ್ನು "ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ-2013" ರಡಿ ಭೂಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ. ಭೂಸ್ವಾಧೀನ ಪ್ರಕ್ರಿಯೆ ಮುಕ್ತಾಯಗೊಂಡ ನಂತರ ಕಂದಾಯ ದಾಖಲೆಗಳಲ್ಲಿ ಹಾಗೂ ಸರ್ವೆ ದಾಖಲೆಗಳಲ್ಲಿ ಭೂಕೋರಿಕೆ ಇಲಾಖೆಯ ಹೆಸರಿಗೆ ಇಂಡೀಕರಣ ಮಾಡದೇ ಇರುವುದು, ಹಿಂದಿನ ಭೂಸ್ವಾಧೀನ ಕಾಯ್ದೆ-1894ರಡಿ ಸ್ವಾಧೀನಪಡಿಸಿಕೊಳ್ಳಲಾಗಿದ್ದ ಜಮೀನುಗಳಿಗೆ ಸಂಬಂಧಿಸಿದ ದಾಖಲೆಗಳಲ್ಲಿಯೂ ಸಹ ಈವರೆಗೂ ಇಂಡೀಕರಣ ಮಾಡದ ಕಾರಣ ಅದೇ ಜಮೀನನ್ನು ಪುನರಾವರ್ತಿತವಾಗಿ ಮತ್ತೊಮ್ಮೆ ಸ್ವಾಧೀನಪಡಿಸಿಕೊಂಡು ಪರಿಹಾರ ನೀಡಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಅಲ್ಲದೇ ಸ್ವಾಧೀನಪಡಿಸಿಕೊಂಡಿರುವ ಜಮೀನುಗಳನ್ನು ಭೂಕೋರಿಕೆ ಇಲಾಖೆಗಳು ಉದ್ದೇಶಿತ ಯೋಜನೆಗಳಿಗೆ ಬಳಸಿಕೊಂಡಿದ್ದರೂ ಸಹ ಜಮೀನಿನ ಮಾಲೀಕತ್ವವು ಭೂಮಾಲೀಕರ ಹೆಸರುಗಳಲ್ಲಿಯೇ ಮುಂದುವರೆಯುತ್ತಿರುವ ಪ್ರಕರಣಗಳು ಯಥೇಚ್ಛವಾಗಿರುವುದನ್ನು ಗಮನಿಸಲಾಗಿರುತ್ತದೆ.

ಭೂಸ್ವಾಧೀನ ಪ್ರಕ್ರಿಯೆ ಮುಕ್ತಾಯಗೊಂಡ ನಂತರ ಕಂದಾಯ ದಾಖಲೆಗಳಲ್ಲಿ ಹಾಗೂ ಸರ್ವೆ ದಾಖಲೆಗಳಲ್ಲಿ ಕಡ್ಡಾಯವಾಗಿ ಇಂಡೀಕರಣ ಮಾಡಲು ಅಗತ್ಯ ಕ್ರಮಕೈಗೊಳ್ಳುವಂತೆ ತಿಳಿಸಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ ದಿನಾಂಕ:13.09.2023ರ ಪತ್ರದಲ್ಲಿ ಸೂಚಿಸಲಾಗಿರುತ್ತದೆ, ಅಲ್ಲದೇ ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 13 ಎಕ್ಯೂಎಂ 2022, ದಿನಾಂಕ:17.12.2022 ರಲ್ಲಿ ಈ ಸಂಬಂಧ ಎಲ್ಲಾ ಪ್ರಾದೇಶಿಕ ಆಯುಕ್ತರುಗಳು, ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ವಿಶೇಷ ಭೂಸ್ವಾಧೀನಾಧಿಕಾರಿ / ಉಪ ವಿಭಾಗಾಧಿಕಾರಿ / ಭೂಸ್ವಾಧೀನಾಧಿಕಾರಿಗಳಿಗೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ. ಆದಾಗಿಯೂ ತಮ್ಮ ಇಲಾಖೆಗಳಲ್ಲಿ ಇದುವರೆಗೂ ಭೂಸ್ವಾಧೀನಪಡಿಸಿಕೊಂಡಿರುವ ಜಮೀನುಗಳಿಗೆ ಸಂಬಂಧಿಸಿದ ಭೂದಾಖಲೆಗಳಲ್ಲಿ ಇಲಾಖೆಗಳ ಹೆಸರಿಗೆ ಇಂಡೀಕರಣಗೊಳ್ಳದೇ ಇರುವ ಪ್ರಕರಣಗಳಲ್ಲಿ ಕೂಡಲೇ ತಮ್ಮ ಇಲಾಖೆಯ ಹೆಸರಿಗೆ ಇಂಡೀಕರಣಗೊಳಿಸಲು ತಮ್ಮ ಇಲಾಖಾ ಹಂತದಲ್ಲಿ ಒಬ್ಬ ನೋಡೆಲ್ ಅಧಿಕಾರಿಯನ್ನು ನೇಮಕ ಮಾಡಿ ಆಯಾ ಸಂಬಂಧ ಪಟ್ಟ ಜಿಲ್ಲಾಧಿಕಾರಿಗಳಿಗೆ ನೇರವಾಗಿ ಪ್ರಸ್ತಾವನೆ ಸಲ್ಲಿಸಿ ಇಂಡೀಕರಣ ಮಾಡಲು ಕೂಡಲೇ ಸೂಕ್ತ ಕ್ರಮಕೈಗೊಳ್ಳಲು ಸೂಚಿಸುವಂತೆ ಕೋರಿದೆ.

ಆದರಗಳೊಂದಿಗೆ,

ತಮ್ಮ ವಿಶ್ವಾಸಿ,

AS on leave 16/01/24

**ಇವರಿಗೆ,**
ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.

5th Floor, 3rd Gate, M.S. Building,
Dr. B.R. Ambedkar Veedhi, Bengaluru-560 001
Tel: +91-80-22252731, 22032495

5ನೇ ಮಹಡಿ, 3ನೇ ಗೇಟ್, ಬಹುಮಹಡಿಗಳ ಕಟ್ಟಡ
ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560 001
E-mail:ps.revenue@gmail.com

Generated from eOffice by S Srinivasa, KPTCL-SA-EST(SS), SENIOR ASSISTANT, KARNATAKA POWER TRANSMISSION CORPORATION LTD on 07/05/2024 11:27 AM

# ಕರ್ನಾಟಕ ಸರ್ಕಾರ

ಸಂಖ್ಯೆ: ಎನರ್ಜಿ 49 ಇಇಬಿ 2024

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:22.01.2024

**ಇವರಿಂದ:**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಇಂಧನ ಇಲಾಖೆ,
ಬೆಂಗಳೂರು.

M.D.
24 JAN 2024
KPTCL

**ಇವರಿಗೆ:**

1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ, ಮೈಸೂರು.
4. ವ್ಯವಸ್ಥಾಪಕ ನಿರ್ದೇಶಕರು, ಮಂಗಳೂರು ವಿದ್ಯುತ್ ಸರಬರಾಜು ಕಂಪನಿ, ಮಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ, ಹುಬ್ಬಳ್ಳಿ.
6. ವ್ಯವಸ್ಥಾಪಕ ನಿರ್ದೇಶಕರು, ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ಕಲಬುರಗಿ.

ಮಾನ್ಯರೇ,

ವಿಷಯ: ಭೂ ಸ್ವಾಧೀನವಾದ ಜಮೀನುಗಳಿಗೆ ಸಂಬಂಧಿಸಿದ ಭೂ ಸ್ವಾಧೀನವಾದ ನಂತರ ಕಂದಾಯ ದಾಖಲೆಗಳಲ್ಲಿ ಹಾಗೂ ಸರ್ವೇದಾಖಲೆಗಳಲ್ಲಿ ಇಂದೀಕರಣ ಮಾಡುವ ಬಗ್ಗೆ.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ , ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ಇವರ ದಿನಾಂಕ:05.01.2024ರ ಪತ್ರದಲ್ಲಿ ಭೂ ಸ್ವಾಧೀನವಾದ ಜಮೀನುಗಳಿಗೆ ಸಂಬಂಧಿಸಿದ ಭೂ ಸ್ವಾಧೀನವಾದ ನಂತರ ಕಂದಾಯ ದಾಖಲೆಗಳಲ್ಲಿ ಹಾಗೂ ಸರ್ವೇ ದಾಖಲೆಗಳಲ್ಲಿ ಇಂದೀಕರಣಗೊಳಿಸಲು ನೋಡಲ್ ಅಧಿಕಾರಿಯನ್ನು ನೇಮಕ ಮಾಡುವಂತೆ ಕೋರಿರುತ್ತಾರೆ (ಪ್ರತಿ ಲಗತ್ತಿಸಿದೆ).

ಸದರಿ ವಿಷಯದ ಕುರಿತು ಅಗತ್ಯ ಕ್ರಮವಹಿಸುವಂತೆ ತಮ್ಮನ್ನು ಕೋರಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

(ವಿನೋದ್ ಕುಮಾರ್ ಡಿ.ಎಂ)
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ



Generated from eOffice by S Srinivasa, KPTCL-SA-EST(SS), SENIOR ASSISTANT, KARNATAKA POWER TRANSMISSION CORPORATION LTD on 07/05/2024 11:27 AM